ಇಂಗ್ಲಿಷ್ ಮೂಲ: ಎಚ್.ಎಚ್. ಮನ್ರೊ 'ಸಾಕಿ'
ಕನ್ನಡಕ್ಕೆ: ಆರ್.ಡಿ. ಹೆಗಡೆ ಆಲ್ಮನೆ

ಕಲೆ: ಮುರಳೀಧರ ರಾಠೋಡ್

# ಕತೆಗಾರ

ಬೇಸಿಗೆಯ ಒಂದು ಅಪರಾಹ್ನ ಅದು. ಟ್ರೇನು ಟೆಂಪಲ್ ಕೋಂಬ್ ನಿಲ್ದಾಣ ಸೇರಲು ಇನ್ನೂ ಒಂದು ತಾಸು ಚಲಿಸಬೇಕಿತ್ತು. ಒಳಗೆ ಅಸಾಧ್ಯವಾದ ಧಗೆ. ಬೋಗಿಯೊಳಗೆ ಬಹಳ ಪ್ರಯಾಣಿಕರೇನೂ ಇರಲಿಲ್ಲ. ಒಬ್ಬಳು ಚಿಕ್ಕ ಹುಡುಗಿ, ಮತ್ತೊಬ್ಬಳು ಆಕೆಗಿಂತ ಚಿಕ್ಕವಳು, ಮತ್ತೊಬ್ಬ ಹುಡುಗ, ಅವನೂ ಚಿಕ್ಕವನು. ಆ ಮಕ್ಕಳ ಜೊತೆ ಬಂದ ಆಂಟಿಯೊಬ್ಬಳು ಅತ್ತ ಮೂಲೆಯಲ್ಲಿ ಸೀಟು ಹಿಡಿದು ಕೂತಿದ್ದಳು. ಆ ಕಡೆ ತುದಿಯಲ್ಲಿ ಒಬ್ಬ ಯುವಕನಿದ್ದ. ಅವನು ಬ್ಯಾಚಿಲರ್ ಆಗಿರಬಹುದು. ಯುವಕ ಅಲ್ಲಿ ಅಪರಿಚಿತನಾಗಿದ್ದರೂ ಕೂಡ ಆ ಮಕ್ಕಳು ಗದ್ದಲವೆಬ್ಬಿಸಿ ಬೋಗಿಯ ತುಂಬಾ ಠಳಾಯಿಸಿಕೊಂಡಿದ್ದರು. ಮಕ್ಕಳು ಮತ್ತು ಮಹಿಳೆ ನಡುವೆ ಮಾತನಾಡುವ ಪೈಪೋಟಿ ನಡೆದಿತ್ತು. ಮಹಿಳೆಯ ಮಾತು ಶುರುವಾಗುವುದೇ 'ಬೇಡ'ದಿಂದಾದರೆ ಮಕ್ಕಳು 'ಯಾಕೆ' ಎಂದು ಮಾತುಮಾತಿಗೂ ಕೇಳುತ್ತಿದ್ದರು. ಆ ಯುವಕ ಮಾತ್ರ ತುಟಿ ಬಿಚ್ಚದೆ ಕುಳಿತಿದ್ದ.

ಚಿಕ್ಕ ಹುಡುಗ ಸೀಟ್ ಮೇಲೆ ಬಡಿಯುತ್ತ ದೂಳು ಎಬ್ಬಿಸತೊಡಗಿದಾಗ ಮಹಿಳೆ, 'ಸಿರಿಲ್, ಬೇಡ, ಬಡೀಬೇಡ್ವೊ' ಎಂದು ಗದರಿದಳು. ಬಾ ಇಲ್ಲಿ ಕಿಡಕಿಯ ಹೊರಗೆ ನೋಡ್ತಾ ಕೂತಿರು ಎಂದಳು.

ಹುಡುಗನಿಗೆ ಮನಸ್ಸಿರದಿದ್ದರೂ ಕಿಡಕಿಯ ಪಕ್ಕಕ್ಕೆ ಸರಿದ. 'ಆ ಕುರಿಗಳನ್ನ ಯಾಕೆ ಹಾಗೆ ಹೊಲದಿಂದ ಅಟ್ತಾ ಇದಾರೆ?' ಎಂದು ಕೇಳಿದ.

'ಹೆಚ್ಚು ಹುಲ್ಲು ಇದ್ಯಲ್ಲಾ ಆ ಪಕ್ಕದ ಹೊಲದಲ್ಲಿ, ಅದಕ್ಕಾಗಿ ಅಲ್ಲಿಗೆ ಅಟ್ತಾ ಇದಾರೆ,' ಮಹಿಳೆ ನಿರ್ಲಕ್ಷ್ಯದಿಂದ ಸಮಜಾಯಿಷಿ ನೀಡಿದಳು. ಹುಡುಗ ಉತ್ತರವನ್ನ ಒಪ್ಪಲಿಲ್ಲ. 'ನೋಡು, ಈ ಹೊಲದಲ್ಲೇ ಅಷ್ಟೊಂದು ಹುಲ್ಲಿದೆ! ಹೊಲದ ತುಂಬಾ ಇದೆ.'

'ಪಕ್ಕದ ಹೊಲದಲ್ಲೇ ಹೆಚ್ಚು ಒಳ್ಳೆ ಹುಲ್ಲಿರಬೇಕು.' ಮಹಿಳೆ ತಡವರಿಸಿದಳು. ಹುಡುಗನಿಂದ ಮತ್ತೆ ಪ್ರಶ್ನೆ, 'ಯಾಕೆ ಅದು ಹೆಚ್ಚು ಒಳ್ಳೇದು?' ಆ ಪ್ರಶ್ನೆ ನಿರೀಕ್ಷಿತವಾಗಿತ್ತು.

'ಅಲ್ನೋಡೋ ಹಸುಗಳನ್ನ!' ಮಹಿಳೆ ಉದ್ಗರಿಸಿದಳು. ಸರಿಸುಮಾರು ಎಲ್ಲಾ ಹೊಲಗಳಲ್ಲಿಯೂ ಅಲ್ಲಲ್ಲಿ ಹಸುಗಳು ಮೇಯುತ್ತಿದ್ದರೂ ಕೂಡ ಅವನ ಗಮನ ತಿರುಗಿಸೋದಕ್ಕೆ ಅದೊಂದು ಬಹಳ ಅಪರೂಪದ ದೃಶ್ಯ ಎನ್ನುವಂತಿತ್ತು ಆ ಉದ್ಗಾರ.

'ಯಾಕೆ ಆ ಹೊಲದ ಹುಲ್ಲು ಹೆಚ್ಚು ಚೆನ್ನಾಗಿದೆ?' ಹುಡುಗ ಹೇಳು ಹೇಳು ಎನ್ನುವ ಹಟಕ್ಕೆ ಬಿದ್ದ. ಅದನ್ನೆಲ್ಲ ಕೇಳುತ್ತ ಕುಳಿತ ಯುವಕನಿಗೆ ಕಿರಿಕಿರಿಯಾಗಿ ಸಿಡುಕಿದ. ಥತ್, ಇವನೊಬ್ಬ ಭಾವನೆಯೇ ಇಲ್ಲದ ಮನುಷ್ಯ ಎಂದುಕೊಂಡಳು ಮಹಿಳೆ. ಆದರೆ ಪಕ್ಕದ ಹೊಲದ ಹುಲ್ಲು ಯಾಕೆ ಹೆಚ್ಚು ಒಳ್ಳೆಯದು ಎನ್ನುವ ಬಗ್ಗೆ ಸರಿಯಾದ ವಿವರಣೆ ಸಾಧ್ಯವಾಗದೆ ಮನಸ್ಸಿನಲ್ಲೇ ಒದ್ದಾಡುತ್ತಿದ್ದಳು. ಆ ಇಬ್ಬರು ಹುಡುಗಿಯರಲ್ಲಿ ಚಿಕ್ಕವಳಿಗೆ ಅದೇನು ಉತ್ಸಾಹ ಬಂದಿತೋ ಗೊತ್ತಿಲ್ಲ. 'ಮಂಡಾಲೆ